# ‘ನಮ್ಮನ್ನು ನಾವು ನಂಬೋಣ, ಜಾಗರೂಕರಾಗಿರೋಣ...



ಯಾರೋ ನನ್ನ ರಕ್ಷಣೆಗಿದ್ದಾರೆ ಎಂದು ಕಾಯುತ್ತಾ ಕೂರುವುದನ್ನು ಹೆಣ್ಣುಮಕ್ಕಳು ಮೊದಲು ಬಿಡಬೇಕು. ನಮ್ಮ ರಕ್ಷಣೆ ನಮ್ಮ ಹೊಣೆ ಎಂಬುದು ನಮ್ಮಲ್ಲಿ ಅಂತರ್ನಿರ್ಮಿತವಾಗಬೇಕು.

ಮಹಿಳೆಯರ ಮೇಲಿನ ಅತ್ಯಾಚಾರ ಪ್ರಕರಣ ಸಂಬಂಧ ಡಾಕ್ಯುಮೆಂಟರಿಯೊಂದನ್ನು ನೋಡುತ್ತಿದ್ದೆ. ಒಂದು ಹುಡುಗಿ ರಾಗಿ ಬೀಸಿಕೊಂಡು ಬರಲು ಮನೆಯಿಂದ ಗಿರಣಿಗೆ ಹೊರಟಿರುತ್ತಾಳೆ. ಹಾಗೆ ಹೊರಟವಳು ಎಷ್ಟು ಹೊತ್ತಾದರೂ ಮನೆಗೆ ಮರಳುವುದೇ ಇಲ್ಲ. ಕಾಲುದಾರಿಯಲ್ಲಿ ಹೆಣವಾಗಿ ಬಿದ್ದಿದ್ದ ಆಕೆ, ಅತ್ಯಾಚಾರಕ್ಕೆ ಒಳಗಾಗಿ ಕೊಲೆಯಾಗಿರುತ್ತಾಳೆ. ಆ ಡಾಕ್ಯುಮೆಂಟರಿಯಲ್ಲಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವರ ಅಭಿಪ್ರಾಯಗಳನ್ನೂ ದಾಖಲಿಸಲಾಗಿತ್ತು. ಅದರಲ್ಲಿ ಒಬ್ಬರು ನಿವೃತ್ತ ಪೊಲೀಸ್ ಅಧಿಕಾರಿಯ ಹೇಳಿಕೆ, ಹೆಣ್ಣುಮಕ್ಕಳ ರಕ್ಷಣೆಯ ಬಗ್ಗೆ ದೊಡ್ಡ ಪ್ರಶ್ನೆಯನ್ನೇ ಮುಂದಿಟ್ಟಿತ್ತು. ‘ಆ ಹುಡುಗಿಯೊಬ್ಬಳೇ ಯಾಕೆ ಹೋಗಬೇಕಿತ್ತು, ಮನೆಯವರು ಯಾಕೆ ಕಳಿಸಬೇಕಿತ್ತು. ಹಾಗೆಲ್ಲ ಹೋದರೆ ಹೀಗೇ ಆಗುತ್ತದೆ’ ಎಂದಿದ್ದರು ಅವರು.

ಹುಡುಗಿ ಮೇಲೆ ಅತ್ಯಾಚಾರ ನಡೆದರೆ, ಅದಕ್ಕೆ ಅವಳೇ ಕಾರಣ, ಅವಳದ್ದೇ ತಪ್ಪು ಎನ್ನುವ ವ್ಯವಸ್ಥೆ ನೋಡಿದರೆ, ‘ನಾವು ಎಲ್ಲಿದ್ದೇವೆ’ ಎಂಬ ಪ್ರಶ್ನೆ ಚಿಂತೆಗೆ ದೂಡಿಬಿಡುತ್ತದೆ. ಒಬ್ಬ ವ್ಯಕ್ತಿಯ ರಕ್ಷಣೆ ಇಡೀ ಸಮಾಜದ ಹೊಣೆ. ಆದರೆ ಈ ‘ವಿಕ್ಟಿಮ್ ಬ್ಲೇಮಿಂಗ್’ ಎಂಬ ಹೊಣೆ ಜಾರಿಸಿಕೊಳ್ಳುವ ಕೆಲಸ ಮಾತ್ರ ಅಂದಿನಿಂದ ಇಂದಿಗೂ ಮುಂದುವರೆದೇ ಇದೆ.

ಅದೇ ಡಾಕ್ಯುಮೆಂಟರಿಯಲ್ಲಿ ಮಹಿಳೆಯೊಬ್ಬರು ಮಾತನಾಡಿದ್ದರು. ‘ನಮ್ಮನ್ನು ರಕ್ಷಿಸುತ್ತಾರೆ ಎಂದುಕೊಂಡವರೇ ನಮ್ಮ ಮೇಲೆ ಯಾವಾಗ ಬೇಕಾದರೂ ಅಪರಾಧ ಎಸಗಿಬಿಡಬಹುದು. ನಮ್ಮನ್ನು ಕಾಪಾಡುತ್ತಾರೆ ಎಂದುಕೊಳ್ಳುವವರ ಬಗ್ಗೆ ಹೆಣ್ಣುಮಕ್ಕಳು ಹುಷಾರಾಗಿರಬೇಕು’ ಎಂದಿದ್ದರು. ಅದ್ಯಾಕೋ ನನ್ನ ಮನಸ್ಸಿಗೆ ನಾಟಿತು.

ಇದೇ ಈ ಹೊಸ ವರ್ಷಕ್ಕೆ ಹೆಣ್ಣು ಮಕ್ಕಳು ಕಲಿಯಬೇಕಾದ ಬಹುದೊಡ್ಡ ಪಾಠವೂ ಎಂದು ನನಗನ್ನಿಸಿತು. ನನ್ನ ಪ್ರಕಾರ, ಯಾರಾದರೂ ಬಂದು ನನ್ನನ್ನು ಕಾಪಾಡುತ್ತಾರೆ, ಯಾರೋ ನನ್ನ ರಕ್ಷಣೆಗಿದ್ದಾರೆ ಎಂದು ಕಾಯುತ್ತಾ ಕೂರುವುದನ್ನು ಹೆಣ್ಣುಮಕ್ಕಳು ಮೊದಲು ಬಿಡಬೇಕು. ನಮ್ಮ ರಕ್ಷಣೆ ನಮ್ಮ ಹೊಣೆ ಎಂಬುದು ನಮ್ಮಲ್ಲಿ ಅಂತರ್ನಿರ್ಮಿತವಾಗಬೇಕು. ಅವಶ್ಯವಿದ್ದಾಗ ನಮ್ಮ ದನಿಯೆತ್ತಬೇಕು, ಪ್ರತಿಭಟಿಸಬೇಕು. ಅಂಥ ಜಾಣ್ಮೆ ಕಾದುಕೊಳ್ಳಬೇಕು.



**ಸಂಧ್ಯಾರಾಣಿ**
**ಕಾದಂಬರಿಗಾರ್ತಿ**

ಧಾರ್ಮಿಕ ಸ್ಥಳವೊಂದರಲ್ಲಿ, ಅಲ್ಲಿನ ಉಸ್ತುವಾರಿಯೇ ಸಣ್ಣ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗುವಾಗ ಯಾರನ್ನು ನಂಬಿ ಕೂರುವುದು ಸಮಂಜಸ ಹೇಳಿ? ಮಹಿಳಾ ಕ್ಷೇತ್ರದಲ್ಲಿ ಈ ವರ್ಷ ನನ್ನ ನಿರೀಕ್ಷೆ, ನನ್ನ ಹಾರೈಕೆ ಇದೇ. ನಮ್ಮ ಜವಾಬ್ದಾರಿಗಳನ್ನು ನಾವೇ ತೆಗೆದುಕೊಳ್ಳುವ ಪ್ರಯತ್ನ ಆಗಬೇಕು. ನಮಗೇನು ಬೇಕು, ಅದನ್ನು ಹುಡುಕೋಣ, ನಮಗೆ ಏನು ಬೇಕು ಎಂಬುದನ್ನು ಕೇಳೋಣ. ಅಂಥ ಸಬಲೀಕರಣ ಆಗಬೇಕು ಎಂಬುದು ನನ್ನ ಆಸೆ.

ಈ ಮುನ್ನ, ಹೆಣ್ಣುಮಕ್ಕಳು ಕೆಲಸಕ್ಕೆ ಸೇರಿ ಆರ್ಥಿಕವಾಗಿ ಸಬಲರಾದರೆ ಹಲವು ಸಮಸ್ಯೆಗಳು ಪರಿಹಾರವಾಗುತ್ತವೆ ಎಂದುಕೊಂಡೆವು. ಆದರೆ ಅದು ಪರಿಹಾರವಲ್ಲ ಎಂದು ಅನಿಸುತ್ತಿದೆ. ಅವರ ಸಂಬಳ ಅವರೇ ಖರ್ಚು ಮಾಡುವ ಸ್ವಾತಂತ್ರ್ಯ ನಿಜವಾಗಿಯೂ ಎಷ್ಟು ಮಹಿಳೆಯರಿಗೆ ಇರುತ್ತದೆ ಎಂಬುದು ಮುಖ್ಯ. ಕೆಲಸಕ್ಕೆ ಸೇರಿದ ಮೇಲೆ ಅಷ್ಟು ಸುಲಭವಾಗಿ ಹಳೇ ಜವಾಬ್ದಾರಿಗಳಿಂದ ಮಹಿಳೆ ಕಳಚಿಕೊಳ್ಳಲು ಸಾಧ್ಯವಾಗಿಲ್ಲ. ಬದಲು ಹೊಸದಾಗಿ ಇನ್ನಷ್ಟು ಜವಾಬ್ದಾರಿಗಳು ಅವಳ ಹೆಗಲ ಮೇಲೇರಿ ಕೂತಿವೆ. ‘ಜವಾಬ್ದಾರಿಗಳ ವರ್ಗೀಕರಣ’ ಕುರಿತು ಪಟ್ಟಣಗಳಲ್ಲಿ ಒಂದು ರೀತಿ ಸಮಸ್ಯೆಯಿದ್ದರೆ, ಗ್ರಾಮೀಣ ಭಾಗದಲ್ಲಿ ಇನ್ನೊಂದು ರೀತಿಯದ್ದು. ಇದರ ಬಗ್ಗೆಯೂ ಅವಲೋಕನ ನಡೆಯಬೇಕಿದೆ.

ಹೆಣ್ಣಿನ ಮೇಲಿನ ದೌರ್ಜನ್ಯ ಎಂದರೆ ಲೈಂಗಿಕ ದೌರ್ಜನ್ಯವಷ್ಟೇ ಚರ್ಚೆಗೆ ಬರುತ್ತದೆ. ಅದಷ್ಟೇ ಅಲ್ಲ, ಆರ್ಥಿಕ, ಸಾಮಾಜಿಕ ದೌರ್ಜನ್ಯಗಳು ಕೂಡ ಹೆಣ್ಣು ಎದುರಿಸುತ್ತಿರುವ ಇಂದಿನ ಬಿಕ್ಕಟ್ಟುಗಳೇ.

ಸಬಲೀಕರಣದ ಮಾತನಾಡುತ್ತಲೇ ಸುಮಾರು ವರ್ಷಗಳು ಕಳೆದಿವೆ. ಈ ಮಾತಿನಿಂದ ಎಲ್ಲಾ ಬದಲಾಗಿಬಿಡುತ್ತದೆಂದು ನಾನು ನಂಬುವುದಿಲ್ಲ. ಆದರೆ ಪರಿಸ್ಥಿತಿಯನ್ನು ಎದುರಿಸಲು ನಾವು ಶಕ್ತಿಶಾಲಿಗಳಾಗಬೇಕು. ಯಾರೋ ಕಾಪಾಡುವ ಕಾಲ ಮುಗಿದುಹೋಗಿದೆ ಎಂಬ ಸತ್ಯ ಅರಿತುಕೊಳ್ಳಬೇಕು. ನಮ್ಮನ್ನು ನಾವು ಗಟ್ಟಿಯಾಗಿ ರೂಪಿಸಿಕೊಳ್ಳಬೇಕು. ಗಟ್ಟಿಗಿತ್ತಿಯರಾಗಬೇಕು, ಅದೇ ನಮ್ಮ ಮುಂದಿರುವ ಪರಿಹಾರ.

ದೌರ್ಜನ್ಯಕ್ಕೆ ವಿರುದ್ಧ ಹೋಗುವುದು ಮೊದಲ ಹೆಜ್ಜೆ. ಅದಕ್ಕೆ ಅವಶ್ಯಕವಿದ್ದರೆ ಕಾನೂನಿನ ಸಹಾಯ ತೆಗೆದುಕೊಳ್ಳಬೇಕು. ಇಂದು ಮಹಿಳೆಯರ ಪರ ಹಲವು ಕಾನೂನುಗಳಿವೆ. ಇವುಗಳ ಅರಿವು ಬರಬೇಕು, ಕಾನೂನು ಕಠಿಣವಾಗಿ ಜಾರಿಯಾಗಬೇಕು ಇದು ಈ ವರ್ಷದ ನನ್ನ ನಿರೀಕ್ಷೆ. ಮಹಿಳೆಯರಿಂದ ಕಾನೂನು ದುರುಪಯೋಗದ ಮಾತುಗಳೂ ಬರುತ್ತವೆ. ನೂರರಲ್ಲಿ ಐದು ಮಂದಿ ದುರುಪಯೋಗ ಮಾಡಿಕೊಳ್ಳಬಹುದು. ಆದರೆ ನಿಜವಾಗಿಯೂ ದೌರ್ಜನ್ಯಕ್ಕೊಳಗಾದ 95 ಮಹಿಳೆಯರನ್ನು ಗಣನೆಗೆ ತೆಗೆದುಕೊಳ್ಳಲೇಬೇಕಲ್ಲವೇ? ಕಾನೂನಿನ ಭಯ ಇಲ್ಲ ಎಂದರೆ ಈ ಸಂಖ್ಯೆ ದುಪ್ಪಟ್ಟಾಗುತ್ತದೆ.

ಹೀಗಾಗಿ ವೈಯಕ್ತಿಕವಾಗಿ ನಮ್ಮನ್ನು ನಾವು ಗಟ್ಟಿಯಾಗಿ ರೂಪಿಸಿಕೊಳ್ಳುವುದೇ ಈ ಹೊಸ ವರ್ಷದ ನಿರ್ಣಯವಾಗಬೇಕು. ■